ವಿ-330-87

**ಶ್ರೀ ಎಸ್.ಎಲ್. ಭೋಜೇಗೌಡ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರು ನಿಯಮ 330ರಡಿ ವಿಧಾನಸೌಧ, ವಿಕಾಸಸೌಧ, ಬಹುಮಹಡಿಗಳ ಕಟ್ಟಡ ಹಾಗೂ ಶಾಸಕರ ಭವನದಲ್ಲಿನ ಮೊಬೈಲ್ ನೆಟ್ ವರ್ಕ್ ಸಮಸ್ಯೆ ಕುರಿತು ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರ :**

ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳ ಕಾರಿಡಾರ್ ಹಾಗೂ ಕೊಠಡಿಗಳಲ್ಲಿ ಜಿಯೋ, ವೊಡಫೋನ್, ಐಡಿಯಾ, ಬಿ.ಎಸ್.ಎನ್.ಎಲ್. ಹಾಗೂ ಇತರ ಮೊಬೈಲ್ ನೆಟ್ ವರ್ಕ್ ಸೌಲಭ್ಯವನ್ನು ಉತ್ತಮಪಡಿಸುವ ಸಲುವಾಗಿ ಇ-ಆಡಳಿತ ವತಿಯಿಂದ ಒಂದೇ Coaxial Cable ಮುಖಾಂತರ In Building Solutions (IBS) Antenna ಗಳನ್ನು ಅಳವಡಿಸಲು ಕ್ರಮವಹಿಸಲಾಗುತ್ತಿದೆ. ಈ ಸಂಬಂಧ ದಿನಾಂಕ: 11.03.2020ರಂದು ಸಿ.ಆ.ಸು.ಇ.(ಇ-ಆಡಳಿತ)ವತಿಯಿಂದ ಕರಾರು ಒಪ್ಪಂದಕ್ಕೆ ಸಹಿ ಮಾಡಲಾಗಿದೆ. ಈ ದಿಸೆಯಲ್ಲಿ ಸಮೀಕ್ಷೆ ಪ್ರಾರಂಭಿಸಲು, ಮೊದಲ ಹಂತವಾಗಿ ಬಹುಮಹಡಿ ಕಟ್ಟಡ ಮತ್ತು ವಿಕಾಸಸೌಧವನ್ನು ಗುರುತಿಸಲಾಗಿದೆ. ವಿಕಾಸಸೌಧದ ನೆಲಮಹಡಿ, ಮತ್ತು ಮೊದಲನೇ ಮಹಡಿಯ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಿದ್ದು, ಎರಡನೇ, ಮೂರನೇ ಮತ್ತು ನಾಲ್ಕನೆಯ ಮಹಡಿಗಳ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿರುತ್ತದೆ. ಹೀಗೆ ಹಂತ ಹಂತವಾಗಿ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಿ, ಮೊಬೈಲ್ ನೆಟ್ ವರ್ಕ್ ಸೌಲಭ್ಯವನ್ನು ಉತ್ತಮಪಡಿಸಲು ಕ್ರಮವಹಿಸಲಾಗುತ್ತಿದೆ.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕಡತ ಸಂಖ್ಯೆ: ಸಿಆಸುಇ 118 ಡಿಬಿಎಂ 2020